

ಇನ್ನೆರಡು ದಿನದಲ್ಲಿ ನಿವೃತ್ತಿ ಹೊಂದಲಿರುವ ಗುಂಡನಿಗೆ, ಮುಂದೆ ಹೇಗೆ ಕಾಲ ಕಳೆಯುವುದು ಅನ್ನೋದೆ ದೊಡ್ಡ ಯೋಚನೆ!

ಅದಕ್ಕೇನು ಅಷ್ಟೊಂದು ಯೋಚ್ನೆ ಮಾಡ್ತೀರಾ?

'ನಾನು ರಿಟೈರ್ ಆಗಿ ಮೂರು ವರ್ಷ ಆಯ್ತಲ್ಲ. ಕಾಲ ಕಳೆಯೋದು ನಂಗೇನೂ ಸಮಸ್ಯೆ ಆಗಿಲ್ಲ' ಅಂತ ಹೆಂಡತಿ ಹೇಳ್ದಾಗ.

ನಿಂಗೇನೋ, ಅಡಿಗೆ, ಮನೆ ಕೆಲಸ ಅಂತ ಕಾಲ ಕಳೆಯುತ್ತೆ ಅಂದ.

ಹೆಂಡತಿ ಅದಕ್ಕೇನಂತೆ ಕೆಲಸದಮ್ಮನನ್ನು ಬಿಡಿಸಿ ಇನ್ಮೇಲೆ ನಿಮಗೂ ಮನೆ ಕೆಲಸ ಕೊಡ್ತೀನಿ. ಹೇಗಿದ್ರೂ ಬರೋದೆ ಅರ್ಧ ಸಂಬಳ. ದುಡ್ಡೂ ಉಳಿದಂಗಾಯ್ತು, ಕಾಲ ಕಳೆದಂತಾಯ್ತು!

★★★

ಸಿಮ್ 1ರಲ್ಲಿ ಹೆಂಡತಿ 'ಸಂಜೆ ಬೇಗ ಬರ್ತೀರಾ ಅಲ್ವಾ?

ಸಿಮ್ 2 ರಲ್ಲಿ ಪ್ರೇಯಸಿ 'ಡಾರ್ಲಿಂಗ್, ಸಂಜೆ ಪಾರ್ಕ್‌ಲ್ಲಿ ಸಿಗ್ತೀರಾ?

ಇಬ್ಬರಿಗೂ ಗುಂಡನ ಉತ್ತರ, 'ಖಂಡಿತಾ ಬೇಗ ಬಂದ್ಬಿಡ್ತೀನಿ'

ಆದರೆ ಸಂಜೆ ಗುಂಡ ಗೆಳೆಯರ ಜೊತೆ ಬಾರಿಗೆ ಬೇಗನೇ ಹೋದ.

★★★

ಗುಂಡನಿಗೆ ಒಂದು ಸಂದೇಹ. ಮದುವೆ ಆದವರ ಗರ್ಲ್ ಫ್ರೆಂಡ್‌ನ ಸ್ಟೆಪ್ನಿ ಅಂತ ಯಾಕೆ ಅಂತಾರೆ?

ಅದಕ್ಕೆ ಅವನ ಸ್ನೇಹಿತ ಕೊಟ್ಟ ವಿವರಣೆ: ಗಾಡಿಯ ಟೈರ್ ಪಂಚರ್ ಆದಾಗ ಸ್ಟೆಪ್ನಿ ಉಪಯೋಗಿಸ್ತಾರೆ. ಗಂಡನ ಬುದ್ದಿ ಕೆಟ್ಟಾಗ, ಗರ್ಲ್ ಫ್ರೆಂಡ್ ಸಹಾಯ ಪಡೆಯುತ್ತಾನೆ. ಅದಕ್ಕೇ ಇರಬೇಕು!

★★★

ಸಂಜೆ ಶಾಲೆಯಿಂದ ಬಂದ ಮಗ, ಸಮವಸ್ತ್ರ ಕೂಡಾ ಬದಲಾಯಿಸದೇ ಸ್ಟೂಲ್ ಹತ್ತಿ, ಏನನ್ನೋ ಮೇಲಿಡಲು ಹವಣಿಸ್ತಾ ಇದ್ದ. ಏನದು ಅಂತ ಅಮ್ಮ ಕೇಳ್ದಾಗ, ಟೆಸ್ಟ್ ಬುಕ್ ಅಂದ. ಅದನ್ಯಾಕೆ ಮೇಲಿಡ್ತೀ ಅಂದಿದ್ದಕ್ಕೆ, 'ಅಮ್ಮಾ ಟೆನ್ ಔಟ್ ಆಫ್ ಟೆನ್ ಮಾರ್ಕ್ಸ್ ಬಂದಿದೆ. 'ಮ್ಯಾಡಂ ಕೀಪ್ ಇಟ್ ಅಪ್' ಅಂದ್ರು, ಅದಕ್ಕೇ' ಅಂದ.

★★★

ಈಗಷ್ಟೇ ಸ್ಪೋಕನ್ ಇಂಗ್ಲಿಷ್ ಕ್ಲಾಸಿಗೆ ಸೇರಿದ್ದ, ಕಾಮಿನಿ, ಗೆಳತಿಯ ಜೊತೆ ಸಿನಿಮಾಗೆ ಹೋಗಲು ತಯಾರಾಗ್ತಾ ಇದ್ಲು. ಅವಳ ಗೆಳತಿ ಟೈಮ್ ಆಯ್ತು ಬಾ ಬೇಗ ಅಂತ ಕೆಳಗಿನಿಂದ ಕೂಗಿದಾಗ, ಬಾಲ್ಕನಿಗೆ ಬಂದ ಕಾಮಿನಿ, ಗೆಳತಿಯನ್ನು ಮೇಲಕ್ಕೆ ಬಾ ಅಂತ ಕರೆದದ್ದು ಹೀಗೆ 'ವೈ ಆರ್ ಯು ಅಂಡರ್ ಸ್ಟ್ಯಾಡಿಂಗ್, ಕಮ್ ಆನ್.'

★★★

ತರಕಾರಿ ಚೀಲಕ್ಕೆ ಕೈ ಹಾಕಿದ ಹೆಂಡತಿ, ತುಂಡಾದ ನಿಂಬೆ ಹೋಳುಗಳನ್ನು ಕಂಡು ಅವಾಕ್ಕಾಗಿ, ಗುಂಡನನ್ನು ತರಾಟೆಗೆ ತೆಗೆದುಕೊಂಡಳು. ಇದೇನು ನಿಂಬೆ ಹೋಳು ತಂದಿದ್ದು?

ಅಲ್ವೇ ನೀನೇ ವಾಟ್ಸ್ಆ್ಯಪ್ ಮಾಡಿದ್ದೆಯಲ್ಲ, ನಿಂಬೆಹಣ್ಣು 10 PCs ಅಂತ ಅಂದಾಗ.

ಹೆಂಡತಿ ಗಂಡನ ಜಾಣತನಕ್ಕೆ ಮೌನವಾದಳು.

■ ಸಂಗ್ರಹ:
**ಶೋಭಾ ಪುರೋಹಿತ್**

ಆಕೆ: ನಮ್ಮ ಮನೇಲಿ ಕುಡಿತದಿಂದ ತುಂಬ ತೊಂದರೆಯಾಗಿದೆ ಮಾರಾಯ್ತಿ.

ಈಕೆ: ನಿನ್ನ ಗಂಡ ಅಷ್ಟೊಂದು ಕುಡಿತಾನೇನೆ?

ಆಕೆ: ಅವನಲ್ಲ ಕುಡಿಯೋದು, ನಾನು!

★★★

ಆತ : ಕೊರೊನಾದಿಂದ ಅಂತೂ ನಮ್ಮ ದೇಶದ ಉದ್ದೇಶ ಈಡೇರಿದವು.

ಈತ: ಯಾವ ಉದ್ದೇಶ?

ಆತ: ಒಂದು ಜಗತ್ತಿನಲ್ಲಿ ಈಗ ಹಸ್ತಲಾಘವ ಹೋಗಿ ನಮಸ್ತೆ ಬಂದಿದೆ, ಇನ್ನೊಂದು ಸ್ವಚ್ಛ ಭಾರತ ಅಭಿಯಾನಾನೂ ಈಡೇರುತ್ತೆ.

★★★

ಆತ: ಕೊರೊನಾದಿಂದ ಮೊನ್ನೆ ತುಂಬ ಲಾಭ ಆಯ್ತು ಕಣೋ.

ಈತ: ಅದ್ಹೇಗೆ?

ಆತ: ಸಾಲಗಾರರೆಲ್ಲ ಒಂದೇ ಸಲಕ್ಕೆ ಬಂದು ವಕ್ಕರಿಸಿದ್ದರು. ತಕ್ಷಣ ಕೆಮ್ಮಲು ಶುರು ಮಾಡಿದೆ. ಎಲ್ಲರೂ ಮಂಗ ಮಾಯ!

★★★

ಮನೆಯ ಯಜಮಾನ: ನನಗೆ ಈ ಸಲ ಯುಗಾದಿಯಲ್ಲಿ ಅಳಿಯಂದಿರ ಕಾಟವಿಲ್ಲ.

ಪಕ್ಕದ ಮನೆಯಾತ: ಯಾಕೆ ಬರೋದಿಲ್ಲ ಅಂತ ಹೇಳಿದ್ದಾರಾ?

ಮನೆಯ ಯಜಮಾನ: ಇಲ್ಲ. ನಮ್ಮೂರಲ್ಲಿ ಕೊರೊನಾ ಶಂಕಿತರಿದಾರೆ ಅಂತ ಫೋನ್ ಮಾಡ್ದಾಗ ಹೇಳ್ದೆ, ಅವ್ರೇ ಈ ವರ್ಷ ಬರೋದಿಲ್ಲ ಅಂದ್ರು.

■ ಸಂಗ್ರಹ: **ಪ್ರಕಾಶ.ಎಸ್.ಮನ್ನಂಗಿ**

